# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 654 |
| 2. | ಸದಸ್ಯರ ಹೆಸರು | : | ಡಾ: ಎಂ.ಜಿ ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : | 20.08.2026 |
| 4. | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ. ಸಂ. | ವಿಷಯ | ಉತ್ತರ |
|---|---|---|
| ಅ) | ಬಿಎಂಆರ್‌ಸಿಎಲ್ ವತಿಯಿಂದ ರೂ.1,274 ಕೋಟಿ ವೆಚ್ಚದಲ್ಲಿ 177 ಮೆಟ್ರೋ ನಿಲ್ದಾಣಗಳಲ್ಲಿ ಫ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ (PSD) ಅಳವಡಿಸಲು ಸಲ್ಲಿಸಿರುವ ಪ್ರಸ್ತಾವನೆಯ ಇತ್ತೀಚಿನ ಮಾಹಿತಿ ಒದಗಿಸುವುದು; | ಬಿಎಂಆರ್‌ಸಿಎಲ್ ವತಿಯಿಂದ 177 ಮೆಟ್ರೋ ನಿಲ್ದಾಣಗಳಲ್ಲಿ ಫ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ (PSD) ಅಳವಡಿಕೆಯ ಕುರಿತು ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ-3ಎ ರ ವಿಸ್ತೃತ ಯೋಜನಾ ವರದಿಯಲ್ಲಿ (ಡಿ.ಪಿ.ಆರ್) ಪ್ರಸ್ತಾವಿಸಿ, ಡಿ.ಪಿ.ಆರ್‌ನ್ನು ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. |
| ಆ) | ಕಾರ್ಯಾಚಾರಣೆಯಲ್ಲಿರುವ ಹಳೆಯ ನಿಲ್ದಾಣಗಳಲ್ಲಿ ಪಿಎಸ್‌ಡಿ ಅಳವಡಿಸಲು ಇರುವ ತಾಂತ್ರಿಕ ತೊಡಕುಗಳೇನು ಹಾಗೂ ಇತ್ತೀಚೆಗೆ ಹೆಚ್ಚುತ್ತಿರುವ ಟ್ರ್ಯಾಕ್ ಜಿಗಿತ/ ಆತ್ಮಹತ್ಯೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಹಳೆಯ ನಿಲ್ದಾಣಗಳಲ್ಲಿ ಪಿಎಸ್‌ಡಿ ಅಳವಡಿಸಲು ಇರುವ ತಾಂತ್ರಿಕ ತೊಡಕುಗಳ ವಿವರವನ್ನು **ಅನುಬಂಧ** ದಲ್ಲಿ ನೀಡಲಾಗಿದೆ.<br>ಇತ್ತೀಚೆಗೆ ಹೆಚ್ಚುತ್ತಿರುವ ಟ್ರ್ಯಾಕ್ ಜಿಗಿತ/ ಆತ್ಮಹತ್ಯೆ ತಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:<br>➢ ಪ್ಲಾಟ್‌ಫಾರ್ಮ್ ಎರಡು ಬದಿಯಲ್ಲಿ ಸೆಕ್ಯುರಿಟಿ ಗಾರ್ಡ್ ನಿಯೋಜಿಸಲಾಗಿದೆ.<br>➢ ಪ್ಲಾಟ್‌ಫಾರ್ಮ್ ತುದಿಯಿಂದ 1 ಮೀಟರ್ ಅಂತರದಲ್ಲಿ ಹಳದಿ ಪಟ್ಟಿಯನ್ನು ಲೇಪಿಸಿ, ಪ್ರಯಾಣಿಕರನ್ನು ಅದರ ಹಿಂದೆಯೇ ನಿಲ್ಲುವಂತೆ ನೋಡಿಕೊಳ್ಳಲಾಗುತ್ತಿದೆ.<br>➢ ಅಲ್ಲದೇ ಜನಸಂದಣಿ ಹೆಚ್ಚಿರುವ ನಿಲ್ದಾಣಗಳಲ್ಲಿ ಸ್ಟೀಲ್ ಬ್ಯಾರಿಕೇಡ್ ಅಳವಡಿಸಲಾಗಿದೆ.<br>➢ ಇದರಿಂದ ಪ್ರಯಾಣಿಕರು ಟ್ರ್ಯಾಕ್‌ಗಳ ಕಡೆ ಬರದಂತೆ ಎಚ್ಚರ ವಹಿಸಲಾಗಿದೆ. |
| ಇ) | ಟ್ರ್ಯಾಕ್‌ನಲ್ಲಿ ಯಾವುದೇ ವ್ಯಕ್ತಿ ಬಿದ್ದಾಗ ವಿದ್ಯುತ್ ಸ್ಥಗಿತಗೊಂಡು ಮೆಟ್ರೋ ಸಂಚಾರ ಸ್ತಬ್ಧವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೆಚ್‌ಎಎಲ್ / ಆರ್‌ವಿ ರೋಡ್‌ಗಳಲ್ಲಿ ಹಾಕಲಾದ ಬ್ಯಾರಿಕೇಟ್‌ಗಳು ಸುರಕ್ಷತೆಗೆ ಸಮರ್ಪಕವಾಗಿದೆಯೇ; | ಬಂದಿದೆ<br>ಮೆಟ್ರೋದ ಎಲ್ಲಾ ನಿಲ್ದಾಣಗಳಲ್ಲಿ ಫ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ (PSD) ಅಳವಡಿಕೆಯ ಪ್ರಸ್ತಾವನೆ ಇದೆ.<br>ಆರ್.ವಿ. ರೋಡ್, ಎಂ.ಜಿ. ರೋಡ್ ಮತ್ತು ಮೆಜೆಸ್ಟಿಕ್ ನಿಲ್ದಾಣಗಳಲ್ಲಿ ಅಳವಡಿಸಿರುವ ಸ್ಟೀಲ್ ಬ್ಯಾರಿಕೇಡ್‌ಗಳು ಸುರಕ್ಷತೆಗೆ ಸಮರ್ಪಕವಾಗಿವೆ. |

| | | |
|---|---|---|
| ಈ) | ಈ ಯೋಜನೆಯಡಿ ಮೆಜೆಸ್ಟಿಕ್ ಮತ್ತು ಸಿಲ್ಕ್ ಬೋರ್ಡ್ ನಂತಹ ಇಂಟರ್‌ಚೇಂಜ್ ನಿಲ್ದಾಣಗಳಿಗೆ ಮೊದಲ ಆದ್ಯತೆ ನೀಡಲಾಗಿದೆಯೇ ಮತ್ತು ಮುಂಬರುವ ಹೊಸ ನಿಲ್ದಾಣಗಳಲ್ಲಿ ಇದನ್ನು ಯಾವ ಕಾಲಮಿತಿಯೊಳಗೆ ಅಳವಡಿಸಲು ಕ್ರಮಕೈಗೊಳ್ಳಲಾಗಿದೆ? | ಹಂತ-3ಎ ಡಿ.ಪಿ.ಆರ್‌ನ್ನು ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಕೇಂದ್ರ ಸರ್ಕಾರದ ಅನುಮೋದನೆ ಬಂದ ನಂತರ ಇಂಟರ್‌ಚೇಂಜ್ ನಿಲ್ದಾಣಗಳಲ್ಲಿ PSD ಅನ್ನು ಮೊದಲ ಆದ್ಯತೆಯ ಮೇರೆಗೆ ಅಳವಡಿಸಿ, ಉಳಿದ ನಿಲ್ದಾಣಗಳಲ್ಲಿಯೂ ಅಳವಡಿಸಲಾಗುವುದು. |

ಕಡತ ಸಂಖ್ಯೆ: ನಅಇ 167 ಪಿ.ಆರ್.ಜೆ 2026

**(ಕೃಷ್ಣ ಬೈರೇಗೌಡ.)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು

**(ಅನುಬಂಧ-1)**

# ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ **ಡಾ:ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. **495 (654).**

**ವಿಷಯ:** ಮೆಟ್ರೋ ನಿಲ್ದಾಣಗಳಲ್ಲಿ ಫ್ಲಾಟ್‌ಫಾರ್ಮ್ ಸ್ಕ್ರೀನ್‌ಡೋರ್ (PSD) ಅಳವಡಿಕೆ ಕುರಿತು.

**ಉತ್ತರಿಸಬೇಕಾದ ದಿನಾಂಕ:** 20.08.2026.

*****

1. ಪಿ.ಎಸ್.ಡಿ. ಅಳವಡಿಕೆಯ ಕೆಲಸಗಳು ರಾತ್ರಿ ವೇಳೆ (ಮೆಟ್ರೋ ಸಂಚಾರ ಮುಗಿದ ನಂತರ) ನಡೆಯುತ್ತವೆ. ಈ ವೇಳೆ ರಾತ್ರಿ 12.00 ರಿಂದ ಬೆಳಿಗ್ಗೆ 4.00 ತನಕ ಕಾಲಾವಕಾಶವಿದ್ದು, ಎಲ್ಲಾ ಕಾರ್ಯಗಳು ಮುಗಿದ ನಂತರ, ಮೆಟ್ರೋ ಕಾರ್ಯಾಚರಣೆಯಲ್ಲಿ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಬೇಕು. ಕಡಿಮೆ ಸಮಯದಲ್ಲಿ ಹೆಚ್ಚು ಸುರಕ್ಷತೆಯಿಂದ ಕಾರ್ಯ ನಿರ್ವಹಿಸಬೇಕು.
2. ಪ್ರಸ್ತುತ (ಸೇವೆಯಲ್ಲಿರುವ) ಸಿಗ್ನಲಿಂಗ್ ಸಿಸ್ಟಮ್‌ನೊಂದಿಗೆ ಪಿ.ಎಸ್.ಡಿ ಗೇಟ್‌ಗಳನ್ನು integrate ಮಾಡಬೇಕಿದೆ. ಆದ್ದರಿಂದ ಸೇವೆಯಲ್ಲಿರುವ ಸಿಗ್ನಲಿಂಗ್ ಸಿಸ್ಟಮ್‌ಗೆ ಯಾವ ತೊಂದರೆಯೂ ಆಗದಂತೆ ಪಿ.ಎಸ್.ಡಿ ಅಳವಡಿಕೆಗೆ migrate ಮಾಡಬೇಕಿರುತ್ತದೆ. ಅದಕ್ಕೆ ತಕ್ಕಂತೆ Non-regression ಪರೀಕ್ಷೆ ಕೂಡ ಮಾಡಲಾಗುತ್ತದೆ.
3. ಪಿಎಸ್‌ಡಿ ಅಳವಡಿಕೆಯ ಸಮಯದಲ್ಲಿ ಕೆಲವೊಮ್ಮೆ ಮೆಟ್ರೋ ನಿಲ್ದಾಣಗಳನ್ನು ಬಂದ್ ಮಾಡಬೇಕಾಗುತ್ತದೆ. ಇದು ಕೆಲವು ಅನಿವಾರ್ಯ ಸುರಕ್ಷತಾ ಪರೀಕ್ಷೆಗಳು ಸಲುವಾಗಿ ಸಾರ್ವಜನಿಕರ ನಿರ್ಬಂಧವಿರುತ್ತದೆ. ಇದರಿಂದ ಕೆಲಕಾಲ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ.
4. ಪಿಎಸ್‌ಡಿ ಅಳವಡಿಕೆಯ ಸಮಯದಲ್ಲಿ ಕೆಲಸಗಳು ಹೆಚ್ಚಾಗಿ Tracksideನಿಂದ ಮಾಡಬೇಕಿರುತ್ತದೆ. ಆದ್ದರಿಂದ ಕೆಲಸಗಾರರ ಸುರಕ್ಷತೆಗಾಗಿ Third Rail Power ಸಂಪೂರ್ಣ ಸ್ಥಗಿತಗೊಳಿಸಿ, Power Block ಪಡೆದು, ಕೆಲಸದ ಪರಿಸರ ಸುರಕ್ಷಿತವೆಂದು ಖಾತ್ರಿಯಾದ ನಂತರವೇ ಕೆಲಸದ ಪ್ರಾರಂಭಗೊಳ್ಳುತ್ತವೆ.